ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.
**ಸಿಸಿ ನಂ.1852/2022**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ಧ ಃಃ-

ಆರೋಪಿರುಃ 1. ಬಸಲಿಂಗಮ್ಮ ಗಂಡ ಬಸವರಾಜ ಕಲಕಂಬಾ
ವಃ 50 ವರ್ಷ, ಉಃ ಮನೆಕೆಲಸ,

2. ಬಸವರಾಜ ತಂದೆ ಶರಣಬಸಪ್ಪ ಕಲಕಂಬಾ
ವಃ 60 ವರ್ಷ, ಉಃ ಒಕ್ಕಲುತನ,

3. ಶಿವರಾಜ @ ಶಿವಪ್ಪ ಕಲಕಂಬಾ
ವಃ 25 ವರ್ಷ, ಉಃ ಒಕ್ಕಲುತನ ,

4. ಲಿಂಗಾರಾಜ ತಂದೆ ಬಸವರಾಜ ಕಲಕಂಬಾ
ವಃ 19 ವರ್ಷ, ಉಃ ವಿದ್ಯಾರ್ಥಿ
ಎಲ್ಲರೂ ಸಾಃ ಬೆನಕನಳ್ಳಿ ತಾಃ ಸೇಡಂ , ಜ್ಹಿಃ ಕಲಬುರಗಿ

----

ದೋ ಷಾ ರೋ ಪ ಣೆ

ನಾನು ಶ್ರೀ ಬಾಲು, ಬಿ.ಎ.,ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 23-08-2022 ರಂದು ಮದ್ಯಾಹ್ನ 03-00 ಗಂಟೆ ಸುಮಾರಿಗೆ ಸೇಡಂ ಪೋಲಿಸ್ ಠಾಣಾ ವ್ಯಾಪ್ತಿಯಲ್ಲಿ ಬರುವ ಬೆನಕನಳ್ಳಿ ಗ್ರಾಮದ ಪಿರ್ಯಾದಿ ಹೊಲಕ್ಕೆ ಹತ್ತಿ ಇರುವ ಬಂಡಿ ದಾರಿಯಲ್ಲಿ ಚಾಸಾ 1 ನೇದ್ದವರು ಇದ್ದಾಗ ಆರೋಪಿ 1 ರಿಂದ 4 ನೇದ್ದವರು ಕೂಡಿಕೊಂಡು ಬಂದು ಅವರಲ್ಲಿಯ ಆರೋಪಿ 1 ನೇದ್ದವಳು ಹೊಲದ ಬಂದಾರಿ ಹತ್ತಿರ ಬಂದು ಚಾಸಾ 1 ನೇದ್ದವರಿಗೆ ಜಗಳ ತೆಗೆದು ಆರೋಪಿ 1 ನೇದ್ದವಳು ಚಾಸಾ 1 ನೇದ್ದವಳಿಗೆ ಕುಸ್ತಿಗೆ ಬಿದ್ದು ಕೆಳಗಡೆ ಹಾಕಿದ್ದು ಇರುತ್ತದೆ , ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 323 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು ಚಾಸಾ 1 ನೇದ್ದವರ ಜೊತೆ ಜಗಳ ತೆಗೆದು , ಆರೋಪಿ 1 ನೆದ್ದವಳು ಚಾಸಾ 1 ನೇದ್ದವಳಿಗೆ ಕೆಳಗಡೆ ಹಾಕಿ ಅಲ್ಲಿಯೇ ಬಿದ್ದ ಕಲ್ಲನ್ನು ತೆಗೆದುಕೊಂಡು ಅವಳ ಹಣೆಯ ಮೇಲೆ ಹೊಡೆದು ರಕ್ತಗಾಯಪಡಿಸಿರುತ್ತಾಳೆ ಆ ಮೂಲಕ

ಆರೋಪಿತರಾದ ನೀವು ಭಾ.ದಂ.ಸಂ. 324 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ಬಂದಿರುವುದು ಇರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಜಗಳ ತೆಗೆದು, ಆರೋಪಿ 1 ನೆದ್ದವಳು ಚಾಸಾ 1 ನೆದ್ದವರಿಗೆ ಜಗಳ ತೆಗೆದು ಏ ರಂಡಿ ಪಾರ್ವತಿ ಬೋಸಡಿ ನೀವು ನಮಗೆ ಹೊಲದ ಬಂದಾರಿಯಲ್ಲಿ ನೀರು ಬಿಟ್ಟು ನಮಗೆ ಜಗಳ ಮಾಡುತಿ ಚೊದಿ ಮಗಳ ಅಂತಾ  ಬೈದದ್ದು ಹಾಗೂ ಆರೋಪಿ 2 ನೇದ್ದವನು ಈ ರಂಡಿ ಮಗಳದು ಬಹಳ ಆಗ್ಯಾದ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 504 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಚಾಸಾ 1 ರವರೊಂದಿಗೆ ಜಗಳ ತೆಗೆದು ಆರೋಪಿ 3 ಮತ್ತು 4 ನೆದ್ದವರು ಈ ರಂಡಿಗೆ ಇವತ್ತು ಬಿಡಬ್ಯಾಡರಿ ಖಲ್ಲಾಸ ಮಾಡಿರಿ ಅಂತಾ ಜೀವದ ಭಯ ಹಾಕಿರುತ್ತಾರೆ, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 506 ಸಹವಾಚಕ ಕಲಂ 34 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದು ನನ್ನ ಸಂಜ್ಞೆಯಲ್ಲಿ ನಡೆದಿರುವುದು ಇರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 29-11-2024 ಪ್ರ.ದ.ನ್ಯಾದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**
**<u>ಸಿಸಿ ನಂ.1852/2022</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್

-ಃಃ ವಿರುದ್ದ ಃಃ-

ಆರೋಪಿತರು ನಂ.1ಃ ಬಸಲಿಂಗಮ್ಮ ಗಂಡ ಬಸವರಾಜ ಕಲಕಂಬಾ
ವಃ 50 ವರ್ಷ, ಉಃ ಮನೆಕೆಲಸ,
ಎಲ್ಲರೂ ಸಾಃ ಬೆನಕನಳ್ಳಿ ತಾಃ ಸೇಡಂ , ಜ್ಲಿಃ ಕಲಬುರಗಿ ಹಾಗೂ ಇತರರು.

<u>ಆರೋಪಿತರ ಹೇಳಿಕೆ</u>

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಆ-3

ಆ-4

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ- ಆ-1

ಆ-2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 29-11-2024 ಪ್ರ.ದ.ನ್ಯಾದಂ. ಸೇಡಂ.